**NP – 008**

# I Semester B.C.A. Examination, March/April 2023
## (NEP – 2021-22 and Onwards) (F+R)
### ಕನ್ನಡ ಭಾಷಾ ಪತ್ಯ (ಪೇಪರ್ – 1)
### ಗಣಕ ಕನ್ನಡ

K.L.E. Society's Degree College BANGALORE 560 072

Time : 2½ Hours | Max. Marks : 60

I. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**80** ಪದಗಳಿಗೆ ಮೀರದಂತೆ). **(4×5=20)**

1) ಅನುಭವಾಮೃತದ ಓದು ಮನಸ್ಸಿಗೆ ಮುದ ನೀಡುವ ಕುರಿತು ಬರೆಯಿರಿ.
2) ಕರ್ನಾಟಕ ಒಂದೇ ಎಂದು ಹೇಳಿರುವ ಕವಿಯ ಆಶಯವೇನು ?
3) ಮುಬೀನಾಳ ಮದುವೆ ಮುರಿದು ಬೀಳಲು ಇದ್ದ ಕಾರಣಗಳನ್ನು ಕುರಿತು ಬರೆಯಿರಿ.
4) ನಿರ್ವಾಸ ಪರಿಕಲ್ಪನೆಯ ಬಗ್ಗೆ ಟಾರಿಸಿಲಿಯವರ ನಿಲುವೇನು ?
5) ಶಾಸ್ತ್ರೀಯ ಭಾಷೆಯ ಸ್ಥಾನದ ಬಗ್ಗೆ ಡಾ. ಎಂ. ಚಿದಾನಂದ ಮೂರ್ತಿಯವರ ನಿಲುವೇನು ?
6) ಕಂಪ್ಯೂಟರ್ ಕನ್ನಡ ಬಳಕೆಯಾಗುವ ಬಗೆಯನ್ನು ತಿಳಿಸಿ.

II. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**160** ಪದಗಳಿಗೆ ಮೀರದಂತೆ). **(2×10=20)**

1) ''ಹೊಸ ತಂತ್ರಜ್ಞಾನಗಳು ಅವಕಾಶಗಳ ಮಹಾಪೂರವನ್ನೇ ಹರಿಸುತ್ತಿವೆ'' ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.
2) ಕಾಲೇಜಿನ ಬ್ಯೂಟಿಕ್ವೀನ್ ಮುಬೀನ ಸೇಲ್ಸ್‌ಗರ್ಲ್ ಬೇಬಿ ಅಕ್ಕ ಆದದ್ದು ಹೇಗೆ ? ವಿವರಿಸಿ.
3) 'ಎಷ್ಟೊಂದು ಮುಗಿಲುಗಳು' ಕವಿತೆಯ ಸ್ವಾರಸ್ಯವೇನು ? ವಿವರಿಸಿ.

III. ಈ ಕಂಡ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ. **(1×3=3)**

ಮುಬೀನಾಳ ತಾಯಿ ಕುಂಞಪಾತುಮ್ಮ ಹೇಳುವುದನ್ನೇ ನಂಬುವುದಾದರೆ ಮುಕುಂದಣ್ಣ ಎಂದಾದರೂ ಯಾರೊಡನೆಯಾದರೂ ನಕ್ಕು ಮಾತನಾಡಿದ್ದರೆ ಅದು ಆಕೆಯ ಮುದ್ದಿನ ಮಗಳು ಮುಬೀನಾಳೊಂದಿಗೆ ಮಾತ್ರ . ಮುಕುಂದಣ್ಣನ ಸರಸ್ವತೀ ಪುಸ್ತಕ ಭಂಡಾರದ ಎದುರಿನ ರಾಜರಸ್ತೆಯ ಮತ್ತೊಂದು ಬದಿಯ ಪುಟ್ಟ ಗುಡಿಸಲಿನೊಳಗೆ ಬೀಡಿನೂಲಿನೊಂದಿಗೇ ಬದುಕು ಮುಂದುವರಿಸಿದ್ದ ಕುಂಞಪಾತುಮ್ಮಳ ಗಂಡನ ನೆನಪು ಮುಬೀನಾಳಿಗೆ ಇರುವುದು ಸಾಧ್ಯವಿಲ್ಲ. ಎರಡು ವರ್ಷದ ಪುಟ್ಟ ಹುಡುಗಿಯನ್ನು ಬಳುವಳಿಯಾಗಿ ಕೊಟ್ಟು, ದುಡ್ಡು ಮಾಡಿ ಬರಲು ಬೊಂಬಾಯ್‌ಗೆ ಹೋಗಿದ್ದ ಗಂಡ ಮರಳಿ ಬಂದದ್ದಿಲ್ಲ – ರಾಜರಸ್ತೆಯೆದುರಿನ ಅಂಗಡಿಯಲ್ಲಿ ಬೆಳ್ಳಗೆ-ಬೆಳ್ಳಗೆ ಚಲಿಸುವ ದೊಡ್ಡ ದೇಹದ ಮುಕುಂದಣ್ಣ, ಪುಟ್ಟ ಮಗುವಿಗೆ ಅದೇಕೋ ಬಹಳ ಇಷ್ಟವಾಗಿ ಬಿಟ್ಟಿದ್ದ. ಅಂಗಡಿಗೆ ಬರುವ ಗಿರಾಕಿಗಳ ಜತೆಗೂ ಹೆಚ್ಚು ಮಾತನಾಡದ ಮುಕುಂದಣ್ಣನಿಗೆ ಸ್ನೇಹಿತರೆಂಬವರಾರೂ ಇಲ್ಲದ್ದರಿಂದಲೋ ಏನೋ – ಆತನಿಗೂ ಮುಬೀನಾಳಲ್ಲಿ ಆಸಕ್ತಿ ಮೂಡಿತು.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳಿಗೆ ಸ್ವಂತ ವಾಕ್ಯ ರಚಿಸಿ. (2×1=2)

1) ಜನದಟ್ಟಣೆ
2) ಅನುಕಂಪ
3) ಆವಿಷ್ಕಾರ
4) ಮಾತೃ ಭಾಷೆ.

VI. ನಿಮ್ಮ ಗ್ರಾಮಕ್ಕೆ ಗ್ರಂಥಾಲಯವನ್ನು ಕೋರಿ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಒಂದು ಅರ್ಜಿ ಬರೆಯಿರಿ. (1×4=4)

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. (4×1=4)

1) ಶೂಲಧರ
2) ನಿರ್ವಾತ
3) ಪ್ರಭೃತಿ
4) ತೇಜ
5) ಹೆರವರು.

VIII. ಇವುಗಳಲ್ಲಿ ಸರಿ ಉತ್ತರವನ್ನು ಗುರುತಿಸಿ ಬರೆಯಿರಿ (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ). (5×1=5)

1) ಮುಬೀನಾಳ ತಾಯಿಯ ಹೆಸರು
ಅ) ಫಾತಿಮಾ ಆ) ಜರೀನಾ
ಇ) ಕುಂಞಪಾತುಮ್ಮ ಈ) ಸುಮತಿ

2) ಶಾಂತಿ ಶಂಕರನನ್ನು ಯಾವ ರಾಜನಿಗೆ ಹೋಲಿಸಿದಳು ?
ಅ) ಅಶೋಕ ಆ) ಕೃಷ್ಣದೇವರಾಯ
ಇ) ಕೆಂಪೇಗೌಡ ಈ) ವಿಕ್ರಮಾದಿತ್ಯ

3) ಪಾಸ್ಕಲನ ಕೃತಿ ಯಾವುದು ?
ಅ) ಲೆಟರ್ಸ್ ಆ) ವೀಸಾ
ಇ) ಬೆಸ್ಟ್ ಆಫ್ ಕೇವ್ ಈ) ಸ್ಟಾಟಿಸ್ಟಿಕ್ಸ್

4) 'ಒಂದು ಚಿತ್ರ' ಕಥೆಯ ಕರ್ತೃ
ಅ) ವೀಣಾಶಾಂತೇಶ್ವರ ಆ) ಮಹಾಲಿಂಗರಂಗ
ಇ) ಚಂದ್ರಶೇಖರ ಕಂಬಾರ ಈ) ಅಮರೇಶ್ ನುಗಡೋಣಿ

5) ಕನ್ನಡ ಉಪನ್ಯಾಸಕರು ಕಾಲೇಜಿನಲ್ಲಿ ಏನೆಂದು ಕರೆಸಿಕೊಂಡಿದ್ದರು ?
ಅ) ಕನ್ನಡ ಪ್ರೇಮಿ ಆ) ಕ್ರಾಂತಿಕಾರಿ ಇ) ಪುಸ್ತಕ ಪ್ರೇಮಿ ಈ) ಶಾಂತಿದೂತ